ನೀಡುತ್ತಿದ್ದಾರೆ. ವಿದ್ಯಾನಗರದ ಕ್ರೀಡಾ ವಸತಿ ಶಾಲೆಯಲ್ಲಿಯೂ ತರಬೇತಿ ನೀಡಲಾಗುತ್ತಿದೆ. ಸರ್ಕಾರದ ಅಧೀನದಲ್ಲಿರುವ ವಸತಿ ನಿಲಯಗಳು ಮತ್ತು ಮೈದಾನಗಳಲ್ಲಿ ಅವ್ಯವಸ್ಥೆಗಳ ಕೆಲವು ವರದಿಗಳು ಬರುವುದೂ ಇದೆ. ಅದರೂ ಕೆಳ ಮಧ್ಯಮ ಮತ್ತು ಗ್ರಾಮೀಣ ಭಾಗದ ಕ್ರೀಡಾಪಟುಗಳು ಈ ಸೌಲಭ್ಯಗಳನ್ನೇ ನೆಚ್ಚಿಕೊಂಡಿದ್ದಾರೆ.

ಟೇಬಲ್ ಟೆನಿಸ್‌ಗೂ ಬೆಂಗಳೂರೇ ರಾಜಧಾನಿಯಾಗಿದೆ. ಇಲ್ಲಿರುವಷ್ಟು ಟಿಟಿ ತರಬೇತಿ ಕ್ಲಬ್‌ಗಳು ರಾಜ್ಯದ ಬೇರೆ ನಗರಗಳಲ್ಲಿ ಇಲ್ಲ. ಮೈಸೂರಿನಲ್ಲಿ ಕೆಲವು ಕ್ಲಬ್‌ಗಳಿವೆ. ಆದರೆ ಬೆಂಗಳೂರು ಮುಂಚೂಣಿಯಲ್ಲಿದೆ. ಕೆನರಾ ಯೂನಿಯನ್, ಹೊರೈಜನ್ ಮತ್ತಿತರ ಕ್ಲಬ್‌ಗಳು ಇಲ್ಲಿ ಬಾಲಪ್ರತಿಭೆಗಳಿಗೆ ತರಬೇತಿ ನೀಡುತ್ತಿವೆ. ಅರ್ಚನಾ ಕಾಮತ್ ಈಗ ವಿಶ್ವ ಮಟ್ಟದ ಟೂರ್ನಿಗಳಲ್ಲಿ ಮಿಂಚು ಹರಿಸುತ್ತಿದ್ದಾರೆ. ಧಾರವಾಡದಿಂದ ಇಲ್ಲಿಗೆ ಬಂದು ನೆಲೆಸಿ ತರಬೇತಿ ಪಡೆಯುತ್ತಿರುವ ರಕ್ಷಿತ್ ಬಾರಿಗಿಡದ ಕೂಡ ರಾಷ್ಟ್ರಮಟ್ಟದಲ್ಲಿ ಹೆಸರು ಮಾಡುತ್ತಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು ಕೂಡ ತರಬೇತಿ ನಡೆಸುತ್ತಿದೆ. ಅಲ್ಲದೇ ಐಟಿಎಫ್ ಟೂರ್ನಿಗಳನ್ನು ನಡೆಸುವ ಮೂಲಕ ಗಮನ ಸೆಳೆಯುತ್ತಿದೆ. ಗಾಲ್ಫ್ ಕ್ರೀಡೆಗೂ ಬೆಂಗಳೂರು ಖ್ಯಾತಿ ಪಡೆದುಕೊಂಡಿದೆ. ಕ್ಯಾಡಿ ಆಗಿದ್ದ ಚಿಕ್ಕರಂಗಪ್ಪ ಆಟಗಾರನಾಗಿ ಖ್ಯಾತಿಯ ಉತ್ತುಂಗದಲ್ಲಿದ್ದಾರೆ. ಅದಿತಿ ಅಶೋಕ್ ರಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು. ಈಜು ಕ್ರೀಡೆಯ ಸಾಧನೆಯ ಪುಟಗಳನ್ನು ತಿರುವಿ ಹಾಕಿದರೆ ಹೆಮ್ಮೆಯ ಹಲವು ವಿಷಯಗಳು ಸಿಗುತ್ತವೆ. ಕ್ರಿಕೆಟ್ ಮತ್ತು ಬ್ಯಾಡ್ಮಿಂಟನ್ ಗೆ ಸರಿಸಮನಾಗಿ ಬೆಂಗಳೂರಿನ ಈಜುಪಟುಗಳು ಸಾಧನೆ ಮಾಡುತ್ತಿದ್ದಾರೆ. ರಾಷ್ಟ್ರದಲ್ಲಿ ಅಗ್ರಸ್ಥಾನದಲ್ಲಿ ಇಲ್ಲಿಯ ಈಜುಪಟುಗಳಿದ್ದಾರೆ. ಬಸವನಗುಡಿ ಈಜುಕೇಂದ್ರ, ಡಾಲ್ಫಿನ್ಸ್, ನೆಟ್ಟಕಲ್ಲಪ್ಪ ಈಜುಕೇಂದ್ರ, ಸ್ವಿಮ್‌ಲೈಫ್ ಸೇರಿದಂತೆ ಹಲವು ಈಜು ತರಬೇತಿ ಕ್ಲಬ್‌ಗಳು ಇಲ್ಲಿವೆ. ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಸತತವಾಗಿ ಇಲ್ಲಿಯ ಈಜು ತಂಡಗಳು ಪ್ರಶಸ್ತಿ ಗೆಲ್ಲುತ್ತಿವೆ. ಒಲಿಂಪಿಯನ್ ನಿಶಾ ಮಿಲ್ಲೆಟ್, ಸಂದೀಪ್ ಸೆಜ್ವಾಲ್ ಬೆಂಗಳೂರಿನ ತರಬೇತಿಯಿಂದಲೇ ಪ್ರವರ್ಧಮಾನಕ್ಕೆ ಬಂದವರು. ಇದೀಗ ಭೂಮಿಕಾ ಗೌಡ, ಅರವಿಂದ್, ಖುಷಿ ದಿನೇಶ್ ಅವರಂತಹ ಉದಯೋನ್ಮುಖ ಪ್ರತಿಭೆಗಳು ಗಮನ ಸೆಳೆಯುತ್ತಿದ್ದಾರೆ.




ಕ್ರಿಕೆಟ್‌ಗೆ ಹಣದ ಹೊಳೆ... ಟೀಮ್ ಇಂಡಿಯ ಕ್ಯಾಪ್ಟನ್ ವಿರಾಟ್ ಕೊಹ್ಲಿ

## ಬೆಂಗಳೂರಿಗೆ ಬರಲಿದೆ ಬಿಸಿಸಿಐ!

ಬೆಂಗಳೂರಿನ ಕ್ರೀಡಾ ಚಟುವಟಿಕೆಗಳು ಉತ್ತುಂಗಕ್ಕೇರುತ್ತಿರುವ ಈ ಸಂದರ್ಭದಲ್ಲಿ ಮತ್ತೊಂದು ಖುಷಿಯ ಸಂಗತಿ ಇದೆ. ಅತ್ಯಂತ ಶ್ರೀಮಂತ ಕ್ರಿಕೆಟ್ ಸಂಸ್ಥೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೇಂದ್ರ ಕಚೇರಿಯು ಬೆಂಗಳೂರಿಗೆ ಸ್ಥಳಾಂತರಗೊಳ್ಳಲಿದೆ.

ಸದ್ಯ ಮುಂಬೈನಲ್ಲಿರುವ ಬಿಸಿಸಿಐಗೆ ಸ್ವಂತ ಕಟ್ಟಡ ಇಲ್ಲ. ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಸಂಸ್ಥೆಯ ಕಚೇರಿ ಇದೆ. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಗೂ ಸ್ವಂತ ಕಟ್ಟಡವಿಲ್ಲ. ಚಿನ್ನಸ್ವಾಮಿ ಕ್ರೀಡಾಂಗಣದ ಒಂದು ಭಾಗದಲ್ಲಿ ಇದರ ಅಸ್ತಿತ್ವ. ಎನ್‌ಸಿಎ ಸ್ವಂತ ಕಾಲ ಮೇಲೆ ನಿಲ್ಲಬೇಕು ಎಂಬ ಉದ್ದೇಶದಿಂದ ಬೆಂಗಳೂರು ಉತ್ತರದ ಬಾಗಲೂರು ಬಳಿ 40 ಎಕರೆ ಸ್ಥಳವನ್ನು ಬಿಸಿಸಿಐ ಖರೀದಿಸಿದೆ. ಇಲ್ಲಿ ಎನ್‌ಸಿಎ ಸ್ಥಾಪನೆಗೆ ಸಂಬಂಧಿಸಿದ ಕೆಲಸಗಳು ಸದ್ಯದಲ್ಲೇ ಆರಂಭವಾಗಲಿವೆ. ಇದೇ ಸ್ಥಳವನ್ನು ಆಡಳಿತ ಕೇಂದ್ರವನ್ನಾಗಿಸುವ ಉದ್ದೇಶವೂ ಇದೆ. ಇದಕ್ಕಾಗಿ ಮಂಡಳಿಯ ಹಂಗಾಮಿ ಅಧ್ಯಕ್ಷ ಸಿ.ಕೆ.ಖನ್ನಾ ಅವರು ಎಲ್ಲ ಸದಸ್ಯರ ಅಭಿಪ್ರಾಯ ಕೋರಿ ಪತ್ರ ಬರೆದಿದ್ದಾರೆ. ಬಾಡಿಗೆ ಕಟ್ಟಡದಲ್ಲಿ ಕಚೇರಿ, ಓಡಾಡಲು ಇಕ್ಕಟ್ಟಾದ ಸ್ಥಳ ಇತ್ಯಾದಿ ಸಮಸ್ಯೆಗಳಿಂದ ಬೇಸರಗೊಂಡಿರುವ ಸದಸ್ಯರು ಸ್ಥಳಾಂತರಕ್ಕೆ ವಿರೋಧ ವ್ಯಕ್ತಪಡಿಸಲಾರರು ಎಂಬ ವಿಶ್ವಾಸ ಮಂಡಳಿಗೆ ಇದೆ. ಮುಂಬೈನಲ್ಲಿ ಬಿಸಿಸಿಐ ಸಭೆಗಳು ಹೋಟೆಲ್‌ನಲ್ಲಿ ನಡೆಯುತ್ತವೆ. ಬೆಂಗಳೂರಿನಲ್ಲಿ ಸ್ವಂತ ಕಟ್ಟಡ ಆದ ನಂತರ ಈ 'ಹೊರೆ'ಯನ್ನು ಕೂಡ ಇಳಿಸಲು ಮಂಡಳಿಗೆ ಸಾಧ್ಯವಾಗಲಿದೆ.

ಎನ್‌ಸಿಎಯಲ್ಲಿ ಮೂಲಸೌಲಭ್ಯ ಕಲ್ಪಿಸುವುದರಿಂದ ಕ್ರಿಕೆಟ್‌ಗೆ, ವಿಶೇಷವಾಗಿ ಸ್ಥಳೀಯ ಕ್ರಿಕೆಟ್‌ಗೆ ಅನುಕೂಲ ಇದೆ. ಆದರೆ ಬಿಸಿಸಿಐ ಆಡಳಿತ ಇಲ್ಲಿಗೆ ಸ್ಥಳಾಂತರ ಆಗುವುದರಿಂದ ಆಡಳಿತ ಇಲ್ಲೇ ಇದೆ ಎಂಬುದೊಂದು ಬಿಟ್ಟರೆ, ಉದ್ಯೋಗ ಮತ್ತು ಪ್ರವಾಸೋದ್ಯಮದ ದೃಷ್ಟಿಯಿಂದ ಒಂದಷ್ಟು ಬೆಳವಣಿಗೆಗೆ ಇದು ಸಹಕಾರಿ ಆಗಲಿದೆ ಎಂಬುದು ಹಿರಿಯ ಕ್ರಿಕೆಟಿಗರ ಅಭಿಪ್ರಾಯ. ಅಂದಾಜು ₹ 500 ಕೋಟಿ ಮೊತ್ತ ವೆಚ್ಚ ಮಾಡಿ ಮೂಲಸೌಲಭ್ಯಗಳನ್ನು ಕಲ್ಪಿಸುವುದರಿಂದ ಎನ್‌ಸಿಎದಲ್ಲಿ ಕ್ರಿಕೆಟ್ ಚಟುವಟಿಕೆ

### ಬಿಸಿಸಿಐ ಪ್ರಮುಖ ದೇಶಿ ಟೂರ್ನಿಗಳಿಗೆ ನೀಡುವ ಬಹುಮಾನ (₹)

| ಟೂರ್ನಿ | ವಿಜೇತ | ರನ್ನರ್ಸ್ ಅಪ್ |
|---|---|---|
| ರಣಜಿ ಟ್ರೋಫಿ | 2 ಕೋಟಿ | 1 ಕೋಟಿ |
| ರಾಜಸಿಂಗ್ ಡುಂಗರಪುರ್ ಟ್ರೋಫಿ (ಕಾರ್ಪೊರೆಟ್) | 1 ಕೋಟಿ | 50 ಲಕ್ಷ |
| ಇರಾನಿ ಕಪ್ | 10 ಲಕ್ಷ | — |
| ಎನ್.ಕೆ.ಪಿ. ಸಾಳ್ವೆ ಚಾಲೆಂಜರ್ | 15 ಲಕ್ಷ | 10 ಲಕ್ಷ |
| ದುಲೀಪ್ ಟ್ರೋಫಿ | 30 ಲಕ್ಷ | 15 ಲಕ್ಷ |
| ವಿಜಯ್ ಹಜಾರೆ ಟ್ರೋಫಿ | 20 ಲಕ್ಷ | 10 ಲಕ್ಷ |
| ಸಿ.ಕೆ. ನಾಯ್ಡು ಟ್ರೋಫಿ | 10 ಲಕ್ಷ | 5 ಲಕ್ಷ |
| ಕೂಚ್ ಬೇಹರ್ ಟ್ರೋಫಿ | 6 ಲಕ್ಷ | 3 ಲಕ್ಷ |